**SC No. 72/2020**
**C-w 137/2022**

**P.W. 4**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 72/2020 C-w 137/2022 P.W. 4**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **12.08.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **PR** ವಕೀಲರಿಂದ</u> : 1. ಪೊಲೀಸರು ಮಹಜರ್ ಮಾಡಲು ಬರಬೇಕೆಂದು ನಮ್ಮ ಶಾಲೆಗೆ ಬಂದು ನೋಟೀಸ್ ಅನ್ನು ನೀಡಿದ್ದರು. ದಿನಾಂಕ ನೆನಪಿಲ್ಲ. ನಾನು ಮತ್ತು ವಿನೋದ್, ಶಿಕ್ಷಕರು ರವರು ಸೇರಿ ಹೋಗಿದ್ದೆವು. ಸ್ಥಳಕ್ಕೆ ಬರುವ ಮೊದಲು ಮಹಜರ್ ಮಾಡುತ್ತೇವೆ ಸ್ಥಳಕ್ಕೆ ಬನ್ನಿ ಎಂದು ಕರೆದಕೊಂಡು ಹೋದರು. ಒಟ್ಟು 7 – 8 ಜನರು ಇದ್ದರು. ಪೊಲೀಸರು ನಮ್ಮ ಶಾಲೆಗೆ ನಮ್ಮನ್ನು ಕಳುಹಿಸಿಕೊಡವಂತೆ ಯಾವುದೇ ಮನವಿ ನೀಡಿರಲಿಲ್ಲ ಎಂದರೆ ಸರಿ ಅಲ್ಲ. ಪೊಲೀಸರು 5 – 6 ಜನರು ಇದ್ದರು, ನಿಖರವಾಗಿ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಏನು ಬರವಣಿಗೆ ಮಾಡಿಕೊಂಡರು ಎಂದು ಗೊತ್ತಿಲ್ಲ. ಪೊಲೀಸರು ಬರವಣಿಗೆ ಮಾಡಿಕೊಂಡಿದ್ದನ್ನು ಓದಿ ಹೇಳಿಲ್ಲ. ನಾನು ಪೊಲೀಸರಿಗೆ ಏನು ಬರೆದುಕೊಂಡಿದ್ದೀರಿ ಎಂದು ಕೇಳಿಕೊಂಡಿಲ್ಲ. ಸ್ಥಳದ ಚೆಕ್ಕು ಬಂದಿ ಹೇಳಲು ನೆನಪಿಲ್ಲ. ನಾನು ಸ್ಥಳದಲ್ಲಿ ಯಾವುದೇ ಸಹಿ ಮಾಡಿಲ್ಲ, ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಸಮಕ್ಷಮ ವಸ್ತುಗಳನ್ನು ಸೀಲ್ ಮಾಡಿರಲಿಲ್ಲ ಎಂದರೆ ಸರಿ ಅಲ್ಲ. ನನಗೆ ಈ ಪ್ರಕರಣದ ಬಗ್ಗೆ ಯವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.